**ಸಿಮಿಸ್ 272/2022**

**ಪಿಡಬ್ಲ್ಯೂ-1**

**ದಿನಾಂಕಃ 04.04.2024 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ ಎಂ ವಕೀಲರಿಂದ**

ನನ್ನ ಮತ್ತು ಎದದುರುದಾರರ ವಿವಾಹ ರಂಗಸಮುದ್ರ ಗೇಟ್ ಬಳಿ ಇರುವ ಸುಮಂಗಲಿ ಕಲ್ವೆಂಷನ್ ಹಾಲ್ ನಲ್ಲಿ ಆಗಿರುತ್ತದೆ. ವಿವಾಹನವಾದಾಗ ಕೋವಿಡ್ ಸಾಂಕ್ರಾಮಿಕ ಕಾಯಿಲೆ ಇದ್ದ ಸಮಯವಾದ್ದರಿಂದ ಸಮಾರಂಭಗಳಿಗೆ ಹೆಚ್ಚು ಜನ ಸೇರುವ ಆಗಿರಲಿಲ್ಲ ಎಂದರೆ ಸರಿಯಲ್ಲ. ವಿವಾಹದ ಖರ್ಚು ವೆಚ್ಚವನ್ನು ಎದುರುದಾರರು ಬರಿಸಿರುತ್ತಾರೆ ಎಂದರೆ ಸರಿಯಲ್ಲ. ವಿವಾಹವಾದ ನಂತರ 1 ½ ವರ್ಷಗಳ ನಾನು ಎದುರುದಾರರ ಮನೆಯಲ್ಲಿರುತ್ತೇನೆ. ನಾನು ವಿವಾಹವಾದಾಗ ನಂಜನಗೂಡಿನ ಪದವಿ ಕಾಲೇಜಿಗೆ ವಿದ್ಯಾಭ್ಯಾಸಕ್ಕೆ ಸೇರಿಕೊಂಡಿದ್ದೆ ಎಂದರೆ ಸರಿ. ನನ್ನ ಪದವಿಗೆ ಎದುರುದಾರರು ಕಾಲೇಜಿಗೆ ಸೇರಿಸಿರುತ್ತಾರೆ ಎಂದರೆ ಸರಿ. ನನ್ನನ್ನು ಪ್ರತಿದಿನ ಎದುರುದಾರರು ದ್ವಿಚಕ್ರ ವಾಹನದಲ್ಲಿ ಕಾಲೇಜಿಗೆ ಕರೆದುಕೊಂಡು ಹೋಗಿ ಬರುತ್ತಿದ್ದರು ಎಂದರೆ ಸರಿಯಲ್ಲ. ದಿನನಿತ್ಯ ಮತ್ತು ಕಾಲೇಜಿನ ಖರ್ಚು ವೆಚ್ಚವನ್ನು ಎದುರುದಾರರು ಭರಿಸುತ್ತಿದ್ದರು ಎಂದರೆ ಸರಿಯಲ್ಲ. ನನಗೆ ವಿವಾಹವಾಗುವ ಮೊದಲು ಗರ್ಭಕೋಶದಲ್ಲಿ ತೊಂದರೆ ಇತ್ತು ಎಂದರೆ ಸರಿಯಲ್ಲ. ಈ ಸಂಬಂಧ ನನಗೆ ಗೋವರ್ಧನ್ ರವರು ಚಿಕಿತ್ಸೆ ಕೊಡಿಸಿದ್ದರು ಎಂದರೆ ಸರಿಯಲ್ಲ. ನಾನು ಒಂದು ಸಾರಿ ಮೈಸೂರಿನ ಜ್ಯೋತಿ ಹೆಲ್ತ್ ಸೆಂಟರ್ ನಲ್ಲಿ ಚಿಕಿತ್ಸೆ ಪಡೆದಿದ್ದೆ ಎಂದರೆ ಸರಿ. ನಾನು ಅರ್ಚನ ಎಂಬ ವೈದ್ಯರಿಂದ ಚಿಕಿತ್ಸೆ ಪಡೆದಿದ್ದೆ ಎಂದರೆ ಸರಿ. ನನಗೆ ವಿವಾಹಕ್ಕೆ ಮೊದಲೇ ಗರ್ಭಕೋಶದಲ್ಲಿ ತೊಂದರೆ ಇದ್ದು, ನಾನು ವಿವಾಹವಾದ ನಂತರ ಎದುರುದಾರರು ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗರ್ಭಕೋಶದಲ್ಲಿ ತೊಂದರೆ ಇದ್ದರಿಂದ ಸದರಿ ವಿಚಾರವನ್ನು ಎದುರುದಾರರಿಗೆ ತಿಳಿಸದೇ ವಿವಾಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಗರ್ಭಕೋಶದಲ್ಲಿ ತೊಂದರೆ ಇರುವ ಬಗ್ಗೆ ವೈದ್ಯರು ವರದಿ ನೀಡಿದ್ದು ಸದರಿ ದಾಖಲೆ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು

ಎದುರುದಾರರ ಬಳಿ ಇದೆ ಎಂದು ನುಡಿಯುತ್ತಾರೆ. ವೈದ್ಯರು ಕೊಟ್ಟ ವರದಿ ನನ್ನ ಬಳಿ ಇದ್ದು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದರೆ ಸತ್ಯಾಂಶ ಹೊರ ಬರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಆರೋಗ್ಯ ಸರಿ ಇಲ್ಲದ ಕಾರಣದಿಂದ ನನ್ನ ಗಂಡನ ಮನೆ ಬಿಟ್ಟು ನನ್ನ ತವರು ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಿವಾಹವಾದಾಗ ಎದುರುದಾರರು ಚಿನ್ನದ ಆಭರಣಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಆದರೆ ಸದರಿ ಆಭರಣ ಎದುರುದಾರರ ಮನೆಯಲ್ಲಿ ಇದೆ. ನನ್ನ ವಿವಾಹದ ಸಮಯದಲ್ಲಿ ಎದುರುದಾರರು 380 ಗ್ರಾಂ ಚಿನ್ನ ಮತ್ತು ಬೆಲೆ ಬಾಳುವಂತಹ ಸೀರೆಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಚಿನ್ನ ಮತ್ತು ಸೀರೆ ಎಲ್ಲಾ ನನ್ನ ಹತ್ತಿರ ಇವೆ, ಎದುರುದಾರರ ಮನೆಯಲ್ಲಿ ಇಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನಂಜನಗೂಡಿನಲ್ಲಿ ಫೈನಾನ್ಸ್ ನಡೆಸುತ್ತಾರೆ ಮತ್ತು ಮತ್ತೊಂದು ಕಚೇರಿಯಲ್ಲಿ ಸಿಇಒ ಆಗಿ ಕೆಲಸ ಮಾಡುತ್ತಾರೆ. ಅವರು ಫೈನಾನ್ಸ್ ನಡೆಸುತ್ತಾರೆ ಮತ್ತು ಮತ್ತೊಂದು ಕಚೇರಿಯಲ್ಲಿ ಸಿಇಒ ಆಗಿ ಕೆಲಸ ಮಾಡುತ್ತಾರೆ ಎಂದು ತೋರಿಸಲು ದಾಖಲೆ ಕೊಡಲು ನನಗೆ ನನಗೆ ಯಾವುದೇ ತೊಂದರೆ ಇಲ್ಲ. ಎದುರುದಾರರು ಗ್ರಾಮ ಪಂಚಾಯಿತಿ ಸದಸ್ಯರಾಗಿ ಕೆಲಸ ಮಾಡುತ್ತಾರೆ, ಅವರು ನಿರುದ್ಯೋಗಿ ಎಂದರೆ ಸರಿಯಲ್ಲ. ಎದುರುದಾರರು ತಮ್ಮ ಜೀವನ ನಿರ್ವಹನೆಗಾಗಿ ಖಾಸಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮತ್ತೆ ಬೇರೆ ವ್ಯವಹಾರ ಸಹ ಮಾಡುತ್ತಾರೆ ಎಂದು ನುಡಿಯುತ್ತಾರೆ.

ನಮ್ಮ ಊರು ಗುಂಡ್ಲುಪೇಟೆಯಿಂದ 20 ಕಿ ಮೀ ದೂರದಲ್ಲಿದೆ ಎಂದರೆ ಸರಿ. ನಮ್ಮ ಊರಿನಲ್ಲಿ ಬಾಡಿಗೆ ಮನೆ ಸಿಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಬಾಡಿಗೆ ಕೊಡಬೇಕಾದ ಮತ್ತು ಮನೆಗೆ ಖರ್ಚಿಗೆ ಹಣದ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನನಗೆ ಆರೋಗ್ಯದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ನನಗೆ ಆರೋಗ್ಯ ಚೆನ್ನಾಗಿ ಇರುವ ಕಾರಣ ನಾನು ನನ್ನ ಅರ್ಜಿಯಲ್ಲಿ ಕೇಳಿರುವ ಆರೋಗ್ಯ ಸಂಬಂಧ ಕೇಳಿರುವ ವೆಚ್ಚವನ್ನು ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರ

ಮನೆಯನ್ನು ನಾನೇ ಬಿಟ್ಟು ಬಂದಿರುವುದರಿಂದ ಜೀವನಾಂಶ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಎದುರುದಾರರು ನಂಜನಗೂಡು ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಮತ್ತು ಎದುರುದಾರರ ವಿವಾದವನ್ನು ಊರಿನ ಮುಖಂಡರು ಬಗೆಹರಿಸುತ್ತಾರೆ ಎಂದು ನಾನು ನಿಧಾನವಾಗಿ ಈ ಪ್ರಕರಣವನ್ನು ಸಲ್ಲಿಸಿರುತ್ತೇನೆ ಮತ್ತು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ. ನಾನು ಈ ಪ್ರಕರಣ ಸಲ್ಲಿಸುವ ಮತ್ತು ಪೊಲೀಸ್ ಠಾಣೆಯಲ್ಲಿ ದೂರು ನೀಡುವ ಮೊದಲು ಎದುರುದಾರರಿಗೆ ಪೋನ್ ಮೂಲಕ ಮಾನಸಿಕ ಕಿರುಕುಳವಾಗುವ ಸಂದೇಶವನ್ನು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಸಲ್ಲಿಸಿರುವ ವಿವಾಹ ವಿಚ್ಛೇದನಕ್ಕಾಗಿ ಅರ್ಜಿಯ ಪ್ರಕರಣದಲ್ಲಿ ನಾನು ಎದುರುದಾರರಿಗೆ ವ್ಯಕ್ತಿತ್ವಕ್ಕೆ ದಕ್ಕೆ ತರುವಂತೆ ನನ್ನ ತಕರಾರಿನಲ್ಲಿ ಹೇಳಿಕೆಗಳನ್ನು ನಮೂದಿಸಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ನಾನು ಎದುರುದಾರರನ್ನು ಬಿಟ್ಟು ಬಂದಿರುತ್ತೇನೆ, ಎದುರುದಾರರದು ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವ ಜೀವನಾಂಶಕ್ಕೆ ಅರ್ಹಳಲ್ಲ ಮತ್ತು ನನ್ನ ಅರ್ಜಿಯಲ್ಲಿ ಕೇಳಿರುವ ಜೀವನಾಂಶ ಪರಿಹಾರಕ್ಕೆ ಎದುರುದಾರರು ಕೊಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ